# ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜು, ಉಜಿರೆ - 574 240

## ಪೂಜ್ಯ ಶ್ರೀ ಡಿ. ರತ್ನವರ್ಮ ಹೆಗ್ಗಡೆ ಸ್ಮಾರಕ

## ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ



ರಿಗೆ,

ಪ್ರಾಚಾರ್ಯರು ........................................................................................................

........................................................................................................

ದಿನಾಂಕ ......................................

ಮಾನ್ಯರೇ,

ಪ್ರತೀ ವರ್ಷದಂತೆ ಈ ವರ್ಷವೂ ನಮ್ಮ ಸಂಸ್ಥೆಯಲ್ಲಿ **"ಪೂಜ್ಯ ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ"** ನಡೆಯಲಿದೆ. **ಈ ಸ್ಪರ್ಧೆಯನ್ನು 20ನೇ ಜನವರಿ 2018, ಶನಿವಾರದಂದು ಬೆಳಿಗ್ಗೆ 10-00 ಗಂಟೆಗೆ ನಡೆಸಲು ತೀರ್ಮಾನಿಸಿದ್ದೇವೆ.** ನಿಮ್ಮ ಕಾಲೇಜಿನಿಂದ ಈ ಸ್ಪರ್ಧೆಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಕಳುಹಿಸಿಕೊಡುವಿರೆಂದು ನಂಬಿರುತ್ತೇವೆ. ಹೆಸರುಗಳನ್ನು ನೋಂದಾಯಿಸಲು ಕೊನೆಯ ದಿನಾಂಕ ಜನವರಿ 16, 2018.

### ಬಹುಮಾನಗಳು

1. ಅತ್ಯಧಿಕ ಅಂಕ ಗಳಿಸಿದ ಮೊದಲನೆಯ ತಂಡಕ್ಕೆ ಪ್ರಥಮ ಬಹುಮಾನ ರೂ. 10,000/- ಹಾಗೂ ಶ್ರೀ ರತ್ನವರ್ಮ ಹೆಗ್ಗಡೆ ಸ್ಮಾರಕ ಪರ್ಯಾಯ ಫಲಕ.
2. ಅತ್ಯಧಿಕ ಅಂಕ ಗಳಿಸಿದ ಎರಡನೆಯ ತಂಡಕ್ಕೆ ದ್ವಿತೀಯ ಬಹುಮಾನ ರೂ. 8,000/- ಹಾಗೂ ಪ್ರಶಸ್ತಿ ಪತ್ರ
3. ವಿಷಯದ ಪರವಾಗಿ ಹಾಗೂ ವಿರೋಧವಾಗಿ ಮಾತನಾಡಿದ ಅಭ್ಯರ್ಥಿಗಳು ಒಂದೊಮ್ಮೆ ತಂಡ ಪ್ರಶಸ್ತಿ ಪಡೆದವರ ಅಂಕಗಳಿಗಿಂತ ಹೆಚ್ಚು ಅಂಕ ಪಡೆದವರಾಗಿದ್ದಲ್ಲಿ ಅಂಥ ಈರ್ವರಿಗೆ ವೈಯಕ್ತಿಕ ಬಹುಮಾನವಾಗಿ ತಲಾ ರೂ. 3,000/- ನೀಡಲಾಗುವುದು. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು.

### ಸ್ಪರ್ಧೆಯ ನಿಯಮಗಳು

- ಸ್ಪರ್ಧೆಗೆ ಬರುವಾಗ ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಪ್ರಾಚಾರ್ಯರಿಂದ ಗುರುತು ಪತ್ರಗಳನ್ನು ತರುವುದು ಅನಿವಾರ್ಯವಾಗಿದೆ.
- ಕನಿಷ್ಠ ಪಕ್ಷ ಸ್ಪರ್ಧೆ ನಡೆಯುವುದಕ್ಕಿಂತ ಒಂದು ಗಂಟೆ ಮುಂಚಿತವಾಗಿ ಸ್ಪರ್ಧಿಗಳು ಆಗಮಿಸಿ ತಮ್ಮ ಹಾಜರಾತಿಯನ್ನು ದಾಖಲಿಸಬೇಕು.
- ಸ್ಪರ್ಧೆಯಲ್ಲಿ ಚರ್ಚಿಸಬೇಕಾಗಿರುವ ವಿಷಯವನ್ನು ಸ್ಪರ್ಧೆಗಿಂತ ಒಂದು ಗಂಟೆ ಮುಂಚಿತವಾಗಿ ಬಹಿರಂಗಪಡಿಸಲಾಗುತ್ತದೆ.
- ಒಂದು ಕಾಲೇಜಿನಿಂದ ಎರಡು ಮಂದಿಯ ತಂಡ ಭಾಗವಹಿಸಬೇಕು ಹಾಗೂ ಒಬ್ಬರು ವಿಷಯದ ಪರವಾಗಿ ಇನ್ನೊಬ್ಬರು ವಿರೋಧವಾಗಿ ಮಾತನಾಡಬೇಕು. ಕೇವಲ ಒಬ್ಬರು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಚರ್ಚೆಗೆ ನಿಗದಿಪಡಿಸಿರುವ ಕಾಲಾವಧಿ 3+1= 4 ನಿಮಿಷಗಳು.
- ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸ್ಪರ್ಧಿಗಳಿಗೆ ಅವರವರ ಕಾಲೇಜಿನಿಂದ ಸ್ಪರ್ಧೆ ನಡೆಯುವ ಕೇಂದ್ರಕ್ಕೆ ಬರುವ ಹಾಗೂ ಹೋಗುವ ಪ್ರಯಾಣ ವೆಚ್ಚವನ್ನು ಹಾಗೂ ಊಟದ ವ್ಯವಸ್ಥೆಯನ್ನು ಒದಗಿಸಲಾಗುವುದು.
- ಮುಂಚಿತವಾಗಿ ತಿಳಿಸಿದಲ್ಲಿ ವಸತಿ ವ್ಯವಸ್ಥೆಯನ್ನು ಉಚಿತವಾಗಿ ಒದಗಿಸಲಾಗುವುದು.
- ತೀರ್ಪುಗಾರರ ತೀರ್ಮಾನವೇ ಅಂತಿಮ.

---

ರಿಗೆ,

### ವಿದ್ಯಾರ್ಥಿಗಳ ನೋಂದಣಿ ಪತ್ರ

**ಪ್ರಾಚಾರ್ಯರು** ದಿನಾಂಕ :

**ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜು**

**ಉಜಿರೆ - 574 240 (ದ.ಕ.)**

ಪ್ರಿಯರೇ,

ನಿಮ್ಮ ವಿನಂತಿಯ ಮೇರೆಗೆ ಈ ಕೆಳಗೆ ಹೆಸರಿಸಲಾಗಿರುವ ನಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನು ದಿನಾಂಕ ..........................................ರಂದು ನಡೆಯಲಿರುವ **'ಧರ್ಮಸ್ಥಳ ಪೂಜ್ಯ ಶ್ರೀ ಡಿ. ರತ್ನವರ್ಮ ಹೆಗ್ಗಡೆ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ'**ಯಲ್ಲಿ ಭಾಗವಹಿಸುವ ಸಲುವಾಗಿ ಕಳುಹಿಸಿಕೊಡಲಿದ್ದೇವೆ. ವಿದ್ಯಾರ್ಥಿಗಳ ಹೆಸರು ಮತ್ತು ತರಗತಿ.

1 ..............................................................................................

2 ..............................................................................................

(ಪ್ರಾಚಾರ್ಯರು)

---

ಸೂಚನೆ : ●ಭಾಗವಹಿಸುವ ವಿದ್ಯಾರ್ಥಿಗಳ ವಿವರವನ್ನು E-mail ವಿಳಾಸ **drh_kannadadebate@sdmcujire.in** ಇದಕ್ಕೆ ಕಳುಹಿಸಿಕೊಡಬಹುದು.
●ನೋಂದಣಿ ಪತ್ರವನ್ನು ಕಾಲೇಜಿನ ಜಾಲತಾಣ **www.sdmcujire.in**ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ **ಶ್ರೀ ಲಕ್ಷ್ಮೀನಾರಾಯಣ ಕೆ.ಎಸ್.**, ಸಹಾಯಕ ಪ್ರಾಧ್ಯಾಪಕರು (**ಮೊ.: 9743703588**) ಇವರನ್ನು ಸಂಪರ್ಕಿಸಬಹುದು.